

ಕೈಗೆ ಹೊರಳುತ್ತಾ ನಮ್ಮ ಬೊಬ್ಬೆ, ಅಬ್ಬರ, ಜಗಳ, ಅಳು, ಆನಂದಕ್ಕೆ ಜೊತೆಯಾಗುತ್ತಿತ್ತು.

ಇಂತಹ ಹತ್ತು ಹಲವು ಪಾರಂಪರಿಕ ದೇಸೀ ಆಟಗಳು ನಮ್ಮ ಸೃಜನಶೀಲತೆಯ ಸ್ಥಾಯಿ ಲೋಕವನ್ನು ನಿರ್ಮಿಸಿದ್ದು ಸುಳ್ಳಲ್ಲ. ಅನುಕೂಲಕ್ಕೆ ತಕ್ಕಂತೆ ಸಂದರ್ಭಾನುಸಾರ ಆಟಗಳು ಮೂಲ ನಿಯಮಗಳ ಉಲ್ಲಂಘನೆ, ಸಡಿಲಿಕೆ, ತಿದ್ದುಪಡಿಯನ್ನೂ ಪಡೆಯುತ್ತಿದ್ದವು. ಕೆಲವು ಆಟಗಳು ಗಂಡುಮಕ್ಕಳಿಗಷ್ಟೇ ಸೀಮಿತವಾಗಿದ್ದರೂ ಲಗೋರಿ ಆಡುವ ಸಮಯ ಲಿಂಗ ಭೇದವಿಲ್ಲದಂತೆ ಲಂಗ, ಚಲ್ಲಣ ಧರಿಸಿದ ಮಕ್ಕಳ ದಂಡು ಒಂದಾಗಿ ಬೆರೆತು ಬಯಲಿಗೆ ಲಗ್ಗೆ ಇಡುತ್ತಿತ್ತು. ಲಗೋರಿಗೆ ಶ್ರೀಕಾರ ಹಾಕುವ ಮುನ್ನ ತಂಡ ರಚನೆಯಾಗುತ್ತಿತ್ತು. ಇಬ್ಬರು ಸದೃಢ ಆಟಗಾರರು ಕ್ಯಾಪ್ಟನ್ ಸ್ಥಾನದಲ್ಲಿ ನಿಂತು ಸರದಿಯಲ್ಲಿ ಒಬ್ಬೊಬ್ಬರ ಹೆಸರನ್ನು ಕೂಗಿ ತಮ್ಮ ತಂಡಕ್ಕೆ ಆಯ್ಕೆ ಮಾಡಿಕೊಳ್ಳುತ್ತಿದ್ದರು. ಅವರೆಕಾಯಿ ಬಿಡಿಸುವ ಸಮಯ ಉತ್ತಮ ಕಾಯಿಗಳನ್ನೆಲ್ಲಾ ಮೊದಲು ಸುಲಿದು ನಂತರ ಚೀಕಲುಗಳೆಡೆಗೆ ಕೈ ಚಾಚುವಂತೆ ಸದೃಢ ಆಟಗಾರರನ್ನೆಲ್ಲಾ ಆರಿಸಿ ಮುಗಿದ ನಂತರ ಉಳಿಯುತ್ತಿದ್ದ ಚಿಳ್ಳೆಪಿಳ್ಳೆಗಳನ್ನು ಒಲ್ಲದ ಮನಸ್ಸಿನಿಂದಲೇ ತಂಡಕ್ಕೆ ಸೇರಿಸುತ್ತಿದ್ದೆವು.

ಆಟಕ್ಕೆ ಚಾಲನೆ ನೀಡುವ ಮುನ್ನ ಎಲ್ಲರೂ ಬಯಲಿನಲ್ಲಿ ಅಡ್ಡಾಡಿ ಇದ್ದುದರಲ್ಲೇ ಸಮತಟ್ಟಾದ ಏಳೆಂಟು ಕಲ್ಲುಗಳನ್ನು ಆರಿಸಿ ಅಗಲವಾದದ್ದನ್ನು ಅಡಿಗಲ್ಲಾಗಿಸಿ ಮೇಲೆ ಅಳತೆಯನುಸಾರ ಉಳಿದವನ್ನು ಜೋಡಿಸುತ್ತಿದ್ದೆವು. ಟಾಸ್ ಗೆದ್ದ ತಂಡ ನಿಗದಿತ ದೂರದಲ್ಲಿ ನಿಂತು ಚೆಂಡಿನಿಂದ ಗೋಪುರವನ್ನು ಉರುಳಿಸುತ್ತಿತ್ತು. ಹೀಗೆ ಉರುಳಿಸಲು ಪ್ರತೀ ಸ್ಪರ್ಧಿಗೂ ಮೂರು ಅವಕಾಶಗಳು. ಕ್ರಿಕೆಟ್ಟಿನ ವಿಕೆಟ್ ಕೀಪರ್, ಫುಟ್‌ಬಾಲ್‌ನ ಗೋಲ್‌ಕೀಪರ್‌ನಂತೆ ಲಗೋರಿಗೊಬ್ಬ ಸ್ಟೋನ್ ಕೀಪರ್ ಇರುತ್ತಿದ್ದ. ಗೋಪುರ ಉರುಳಿಸಿದ ಕೂಡಲೇ ಚೆಂಡು ಎದುರಾಳಿ ತಂಡಕ್ಕೆ ಸೇರುತ್ತಿತ್ತು. ಅವರು ಆಟಗಾರರೆಡೆಗೆ ಚೆಂಡು ತೂರುವುದು ಅವರು ನುಗುಚಿಕೊಂಡು ಓಡುವುದು ಆ ಬಾಲನ್ನು ತರಲು ಅವರು ಓಡಿದಾಗ ಇವರು ಬಿದ್ದ ಗೋಪುರವನ್ನು ಪುನಃ ನಿಲ್ಲಿಸಲು ಪ್ರಯತ್ನಿಸುವ ಪ್ರಕ್ರಿಯೆ ನಿರಂತರ ಚಾಲ್ತಿಯಲ್ಲಿರುತ್ತಿತ್ತು. ಬಾಲೇಟಿನಿಂದ ಬಚಾವಾಗಿ ಕಲ್ಲುಗಳನ್ನು ಮರುಜೋಡಿಸಿದವರು ಗೆದ್ದಂತೆ. ಉತ್ತಮ ಗುರಿ, ಕೌಶಲ್ಯ, ಚುರುಕುತನ, ಒಳಗೊಳ್ಳುವಿಕೆ ಎಲ್ಲವೂ ಇದ್ದ ತಂಡ ಗೆಲ್ಲುತ್ತಿತ್ತು.

ಲಗೋರಿ ಗೋಪುರಕ್ಕಾಗಿ ಸಮತಟ್ಟಾದ ಕಲ್ಲುಗಳು ಸಿಗದೆ ಆಟ ಹೆಚ್ಚು ಕಾಂಪ್ಲೆಕ್ಸ್ ಆಗುತ್ತಿತ್ತು. ಕೆಲವು ಕಲ್ಲುಗಳು ಕೇರಳ ತಮಿಳುನಾಡಿನ ಆಪಂನಂತೆ ಮಧ್ಯದಲ್ಲಿ ಉಬ್ಬಿಕೊಂಡಿದ್ದರೆ ಇನ್ನು ಕೆಲವು ಅಡುಗೆ ಅರಿಯದ ಎಲ್ ಬೋರ್ಡ್ ಸೊಸೆ ತಟ್ಟಿದ ರೊಟ್ಟಿಯಂತೆ ಆಕಾರಗೆಟ್ಟಿರುತ್ತಿದ್ದವು. ನಾಲ್ಕೈದು ಕಲ್ಲುಗಳನ್ನು ಜೋಡಿಸುವಷ್ಟರಲ್ಲಿ ಅರ್ಧ ಕಟ್ಟಿದ ಗೋಪುರ ವೃದ್ಧರ ಕುತ್ತಿಗೆಯಂತೆ ಅದುರಿ ಎಲ್ಲರ ಗುಂಡಿಗೆ ಕಂಪಿಸಿ ಉಸಿರು ಹ್ರಸ್ವವಾಗುತ್ತಿತ್ತು. ಕೊನೆಯ ಕಲ್ಲಿರಿಸಿ ಸಮಾರೋಪಗೈಯ್ಯುವಷ್ಟರಲ್ಲಿ ಗೋಪುರ ಉರುಳಿ ಇಡೀ ಪ್ರಯತ್ನವೇ ಮಕಾಡೆಯಾಗುತ್ತಿತ್ತು. ಬಿಲ್ಡರ್‌ಗಳು ಸಾವಕಾಶದಿಂದ ಕುಳಿತು ಜೋಡಿಸಲು ಸಮಯದ ಕೊರತೆ, ಎದುರಾಳಿಗಳ ಭಯ, ಕಲ್ಲುಗಳ ಅಸಹಕಾರ! ಇದೆಲ್ಲವನ್ನೂ ಮೀರಿ ನಿಲ್ಲಿಸಿದ ಗೋಪುರ 'ಲಗೋರಿ' ಎಂಬ ಸಂಭ್ರಮದ ಘೋಷಣೆ ಕೂಗುವ ಸಮಯವೇ ಕಳಪೆ ಕಾಮಗಾರಿ ಕಟ್ಟಡದಂತೆ ಕುಸಿದು ಬೀಳುತ್ತಿತ್ತು. ವಿಜಯೋದ್ಘೋಷಕ್ಕೆ ಮುನ್ನ 'ಬಿದ್ದರೆ ಊಫಿ ಲಗೋರಿ' ಎಂಬ ಡಿಸ್‌ಕ್ಲೇಮರ್ ಪಾಸ್ ಮಾಡಿಬಿಟ್ಟರೆ ಗೋಪುರ ಬಿದ್ದರೂ ಊಫಿಯಿಂದ ಮಾಫಿಯಾಗುತ್ತಿತ್ತು. ಆಡುಭಾಷೆಯಲ್ಲಿ ಅದು 'ಬಿದ್ರೂಫಿ ಲಗೋರಿ'ಯಾಗಿ ನಮ್ಮ ಕುಣಿತ, ಚಪ್ಪಾಳೆ, ಕಿರುಚಾಟದ ಕಂಪನಕ್ಕೇ ಎಷ್ಟೋ ಬಾರಿ ಗೋಪುರ ಅದುರಿ ಬಿದ್ದದ್ದೂ ಇದೆ.

ಲಗೋರಿಯೊಂದಿಗೆ ಬಾಲ್ಯದ ಸವಿನೆನಪುಗಳ ದಿಬ್ಬಣ ಮನದ ಭಿತ್ತಿಯಲ್ಲಿ ಹಾದು ಮೊಗದಲ್ಲಿ ಮಂದಹಾಸ ಮಿನುಗಿತು. 'ಊಫಿ' ಪದದ ಮೂಲ ಅರಿಯಲು ಮೊಬೈಲ್ ಹೊರತೆಗೆದು 'ಜೆಡ್' ಪೀಳಿಗೆಯ ಗೂಗಲ್ ಮೊರೆ ಹೋದೆ. ಊಫಿ ಎಂದು ಟೈಪಿಸಿದರೆ ಅದು ಕಾಫಿ ಎಂದು ಆಟೊ ಕರೆಕ್ಷನ್ ಆಯಿತು. ಜಿದ್ದಿಗೆ ಬಿದ್ದು ಅರಿಯಲು ಹೋದರೆ ಅದರ ಅರಿವಿನ ಹಂದರದಲ್ಲಿ ಆ ಪದವೇ ಗೋಚರಿಸಲಿಲ್ಲ. ಗೂಗಲಕ್ಕ ಓಲ್ಡ್ ಆದಳೆಂದು 'ಆಲ್ಫಾ' ಪೀಳಿಗೆಯ ಚಾಟ್ ಜಿಪಿಟಿ ಮೇಲೆ ಬೆರಳಾಡಿಸಿದರೆ ಅದು ಊಫಿಯನ್ನು 'ಉಫ್' ಮಾಡಿ ಆಯಾಸ, ದಣಿವು ಎಂಬರ್ಥ ತೋರಿತು. ಹಳೆಯ ಪೀಳಿಗೆಯವರ ಆಟದ ಬಗ್ಗೆ ಈ ಹೊಸ ಪೀಳಿಗೆಯ ಟೂಲ್‌ಗಳಿಗೆ ತಿಳಿದಿರುವ ಬಗ್ಗೆ ಅನುಮಾನ ಕಾಡಿತು. ಮುಂದಿನ ಸೀಟಿನಲ್ಲಿ ಕುಳಿತಿದ್ದ ನನ್ನ ಆಲ್ಫಾ ಕಿಡ್ ಬಳಿ ಈ ವಿಷಯ ಪ್ರಸ್ತಾಪಿಸಿದೆ. 'ಊಫಿ' ಪದ ಕೇಳಿ ಕಾಫಿ ಅಚ್ಚರಿಯಿಂದ ಒಮ್ಮೆ ಕಣ್ಣು ಪಿಳುಕಿಸಿದ ಕಿಡ್ ನಂತರ ಪಟಪಟನೆ ಕೀ ಪ್ಯಾಡ್ ಮೇಲೆ ಬೆರಳಾಡಿಸಿ ಲಭ್ಯ ಮಾಹಿತಿಯ ಸ್ಕ್ರೀನ್ ಶಾಟ್ ಕಳಿಸಿದ.

'ಇಟ್ ಈಸ್ ಸ್ಟ್ರೀಟ್ ಬಾರ್ನ್ ಸ್ಲ್ಯಾಂಗ್ ಯೂಸ್ಡ್ ಎಸ್ಪೆಷಲಿ ಇನ್ ಇಂಡಿಯನ್ ಪ್ಲೇಗ್ರೌಂಡ್' ಎಂದಿತ್ತು. ಲಗೋರಿ, ಕ್ರಿಕೆಟ್‌ನಂಥ ಆಟಗಳಲ್ಲಿ ಅದನ್ನು ಬಳಸುವ ಬಗ್ಗೆ ಕೂಡ ಮಾಹಿತಿ ಇತ್ತು. ಎಲಾ ಇದರ... ನನ್ನ ಮನವಿಗೆ ಉಫ್ ಎಂದ ಚಾಟ್ ಜಿಪಿಟಿ ಇವನಿಗೆ ಸ್ಪಂದಿಸಿದ ಬಗೆ ಹೇಗೆಂದು ಬೆರಗಾದೆ. ಈ ಪ್ರಾಂಪ್ಟ್ ಎಂಜಿನಿಯರಿಂಗ್ ಸ್ಕಿಲ್ಸ್ ನಮ್ಮಂತಹ ಹಳೆ ಸ್ಕಲ್‌ಗಳಿಗೆ ದಕ್ಕುವುದು ಕಠಿಣವೆನಿಸಿತು. ಹಾಗೆಯೇ ಸ್ಕ್ರೀನ್ ಮೇಲೆ ಬೆರಳಾಡಿಸುತ್ತಾ ಹೋದಂತೆ ಲಗೋರಿಯ ಬಗ್ಗೆ ಇನ್ನಷ್ಟು ಮಾಹಿತಿ ಒದಗಿತು.

'ಆಟವೊಂದೆ ನಾಮ ಹಲವು' ಎಂಬಂತೆ ಕರ್ನಾಟಕ, ಶ್ರೀಲಂಕಾದಲ್ಲಿ ಲಗೋರಿ ಎಂದಾಗಿರುವ ಇದು ಕೆನಡಾದಲ್ಲಿ 'ಟೀಲೊ' ಪಾಕಿಸ್ತಾನದಲ್ಲಿ 'ಪಿಥೊ ಗರಂ' ಆಂಧ್ರದಲ್ಲಿ 'ಲಿಂಗೋಚಾ' ತಮಿಳುನಾಡಿನಲ್ಲಿ 'ಏಜೂ ಕಲ್ಲು' ಕೇರಳದಲ್ಲಿ 'ಡಬ್ಬಾ ಕಾಲಿ' ಎಂದಾಗಿತ್ತು. ಭಗವಾನ್ ಶ್ರೀಕೃಷ್ಣ ಚಿಕ್ಕಂದಿನಲ್ಲೇ ಈ ಆಟವನ್ನು ಆಡುತ್ತಿದ್ದನೆಂದು ಶ್ರೀಕೃಷ್ಣ ಮಹಾತ್ಮೆ ಚರಿತ್ರೆಯ ಅಧ್ಯಾಯಗಳಲ್ಲಿ ಉಲ್ಲೇಖವಿತ್ತು. ಪೇಶ್ವೆ ಇತಿಹಾಸದಲ್ಲಿಯೂ ಲಗೋರಿಯ ನೆರಳಿದ್ದು ಈ ಕ್ರೀಡೆಯನ್ನು ಶಾಂತಿ, ಏಕತೆಗಾಗಿ ಆಡಲಾಗುತ್ತಿತ್ತು ಎನ್ನುವರು ಚರಿತೆ ಪಂಡಿತರು. ಹೀಗೆ ಇತಿಹಾಸ, ಪುರಾಣ ಕಾಲದಿಂದಲೂ ಚಾಲ್ತಿಯಲ್ಲಿರುವ ಲಗೋರಿ ಕ್ರೀಡೆಗೆ ಈಗ ಸಾಂಸ್ಥಿಕ ರೂಪ ದೊರೆತು ಅಂತರಾಷ್ಟ್ರೀಯ ಟೂರ್ನಿಯಲ್ಲೂ ಗುರುತಿಸಿಕೊಂಡಿರುವುದು ವಿಶೇಷ.

ಲಭ್ಯವಾದ ಹೊಸ ಮಾಹಿತಿಯೊಂದಿಗೆ ಲಗೋರಿಯ ಸಿಹಿಯಾದ ಅಮಲಿನಂತಹ ನೆನಪುಗಳು ಗಮ್ಯ ತಲುಪುವ ತನಕ ಲಗ್ಗೆಯಿಡುತ್ತಾ ಇಡೀ ಪ್ರಯಾಣವನ್ನು ಆಹ್ಲಾದಕರವಾಗಿಸಿದವು. ಇಂದು ಮಾಗಿದ ನಮ್ಮ ಬದುಕಿನೆಡೆಗೆ ಪಕ್ಷಿನೋಟ ಬೀರಿದರೆ ಅದೆಷ್ಟು ಬಾರಿ ಲಗೋರಿ ಗೋಪುರವನ್ನು ಕಟ್ಟಲು ಪ್ರಯತ್ನಿಸಿದೆವೆಂದು ಅರಿವಾಗುವುದು. ಜನನವೆಂಬ ಶಿಲಾನ್ಯಾಸದ ಮೇಲೆ ಬಾಲ್ಯ, ಯೌವನ, ಮುಪ್ಪೆಂಬ ಮೈಲಿಗಲ್ಲುಗಳೊಂದಿಗೆ ಸಮತೋಲನ ಸಾಧಿಸುತ್ತಾ ಕಾಲದ ನಿಕಷಕ್ಕೆ ಒಡ್ಡಿಕೊಂಡು ಬಿದ್ದು ಎದ್ದು ನರಳಿ ಹೊರಳಿ ಗೋರಿ ಸೇರುವವರೆಗೂ ಲಗೋರಿ ಪೇರಿಸುವ ಪ್ರಯತ್ನ ನಿರಂತರ ಚಾಲ್ತಿಯಲ್ಲಿರುವುದು. ■